**ಕರ್ನಾಟಕ ಸರ್ಕಾರ**

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು**

ಸಂಖ್ಯೆ:ಹಿಆಸ/27/2019-20 ದಿನಾಂಕ:22.10.2020

**ಸುತ್ತೋಲೆ**

ವಿಷಯ:- ಕಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಯಿಂದ ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಗೆ ಸ್ಥಾನಪನ್ನ ಪದೋನ್ನತಿ ನೀಡಲು ಕಾರ್ಯ ನಿರ್ವಹಣಾ ವರದಿ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲಾತಿಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ:- ನಿರ್ದೇಶನಾಲಯದ ಅಂತಿಮ ಜೇಷ್ಠತಾ ಪಟ್ಟಿಯ ಅಧಿಕೃತ ಜ್ಞಾಪನಾ ಪತ್ರ ಸಂ: ಹಿಆಸ/09/2019-20, ದಿನಾಂಕ:07.10.2020.

* * * *

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಿರಿಯ ಪುರುಷ ಆರೋಗ್ಯ ಸಹಾಯಕರುಗಳಿಗೆ ಹಿರಿಯ ಪುರುಷ ಆರೋಗ್ಯ ಸಹಾಯಕರ ಹುದ್ದೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ಪದೋನ್ನತಿ ನೀಡುವ ಸಲುವಾಗಿ ಉಲ್ಲೇಖದನುಸಾರ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಅರ್ಹ ನೌಕರರುಗಳಿಗೆ Karhfw.Gov.inರಲ್ಲಿ ಪ್ರಕಟಿಸಿರುವ ಅಂತಿಮ ಜೇಷ್ಠತಾ ಪಟ್ಟಿಯಂತೆ ಈ ಕೆಳಕಂಡ ಜೇಷ್ಠತಾ ಸಂಖ್ಯೆಯ ನೌಕರರು ದೃಢೀಕೃತ ದಾಖಲಾತಿಗಳೊಂದಿಗೆ ಕಾರ್ಯ ನಿರ್ವಹಣಾ ವರದಿ ಮತ್ತು ಶೈಕ್ಷಣಿಕ ವಿದ್ಯಾರ್ಹತೆಯ ದಾಖಲಾತಿಗಳನ್ನು ಸಲ್ಲಿಸುವುದು.

| | | |
|---|---|---|
| | **ಕಲ್ಯಾಣ ಕರ್ನಾಟಕ ಭಾಗದ ನೌಕರರು** | |
| 01 | ಸಾಮಾನ್ಯ ವರ್ಗ | ಜೇಷ್ಠತಾ ಸಂಖ್ಯೆ **01 ರಿಂದ 300** |
| 02 | ಪರಿಶಿಷ್ಟ ಜಾತಿ | ಜೇಷ್ಠತಾ ಸಂಖ್ಯೆ **01 ರಿಂದ 330** |
| 03 | ಪರಿಶಿಷ್ಟ ಪಂಗಡ | ಜೇಷ್ಠತಾ ಸಂಖ್ಯೆ **01 ರಿಂದ 330** ರವರೆಗೆ |
| | **ಕಲ್ಯಾಣ ಕರ್ನಾಟಕ ಭಾಗ ಹೊರತುಪಡಿಸಿದ ನೌಕರರು** | |
| 01 | ಸಾಮಾನ್ಯ ವರ್ಗ | ಜೇಷ್ಠತಾ ಸಂಖ್ಯೆ **01 ರಿಂದ 1700** |
| 02 | ಪರಿಶಿಷ್ಟ ಜಾತಿ | ಜೇಷ್ಠತಾ ಸಂಖ್ಯೆ **01 ರಿಂದ 1800** |
| 03 | ಪರಿಶಿಷ್ಟ ಪಂಗಡ | ಜೇಷ್ಠತಾ ಸಂಖ್ಯೆ **01 ರಿಂದ 2000** ರವರೆಗೆ |

1. ಐದು ವರ್ಷಗಳ ಕಾರ್ಯ ನಿರ್ವಹಣಾ ವರದಿ ನಿಗದಿತ ನಮೂನೆ (4,5,6 ಮತ್ತು 7 ನಿಯಮ)

ಎ) ಭಾಗ-I ವೈಯಕ್ತಿಕ ಮಾಹಿತಿ. ಬಿ) ಭಾಗ-II ಸ್ವಯಂ ಮೌಲ್ಯ ಮಾಪನ. ಸಿ) ಭಾಗ-III ವರದಿ. ಡಿ)ಭಾಗ-IV ಪುನರಾವಲೋಕನ. ಇ)ಭಾಗ-V ಅಂಗೀಕಾರ. ಎಫ್) ಭಾಗ-VI ಸಂವಹನ.

2015-16, 2016-17, 2017-18, 2018-19, 2019-20 ರವರೆಗೆ **ಪ್ರತಿ ವರ್ಷಕ್ಕೆ ಪ್ರತ್ಯೇಕವಾಗಿ ಸಲ್ಲಿಸುವುದು. ( ಈ ಮಾದರಿಯಲ್ಲಿ ಸಲ್ಲಿಸದ ಕಾರ್ಯ ನಿರ್ವಹಣಾ ವರದಿಗಳನ್ನು ತಿರಸ್ಕರಿಸಲಾಗುವುದು)**

2. ಎಸ್.ಎಸ್.ಎಲ್.ಸಿ. ಅಂಕಪಟ್ಟಿ: ಜನ್ಮ ದಿನಾಂಕದೊಂದಿಗೆ ಕನ್ನಡ ಭಾಷಾ ಪರೀಕ್ಷೆ ಪಾಸು ಮಾಡಿರುವ ಬಗ್ಗೆ ಮತ್ತು ಕನ್ನಡ ವಿನಾಯಿತಿ ಪ್ರಮಾಣ ಪತ್ರ.
3. ನೇಮಕಾತಿ ಆದೇಶ.
4. ನೌಕರರ ಖಾಯಂ ಪೂರ್ವ ಸೇವಾವಧಿ ಘೋಷಣೆ ಪತ್ರ.
5. ಆರೋಗ್ಯ ಪರಿವೀಕ್ಷಕರ ಪ್ರಮಾಣ ಪತ್ರ.
6. ಪರಿಶಿಷ್ಠ ಜಾತಿ ಪರಿಶಿಷ್ಟ ಪಂಗಡಗಳ ಇತ್ತೀಚಿನ ಪ್ರಮಾಣ ಪತ್ರ ಹಾಗೂ ಈ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಮತ್ತು ಸೇವೆಗೆ ಸೇರುವಾಗ ಯಾವ ಪ್ರವರ್ಗದಡಿ ನೇಮಕಗೊಂಡಿರುತ್ತಾರೆ.
7. ನೌಕರರ ವಿರುದ್ದ ಇಲಾಖಾ ವಿಚಾರಣೆ: ಕ್ರಿಮಿನಲ್ ಮೊಕದ್ದಮೆ: ನ್ಯಾಯಾಲಯದ ಪ್ರಕರಣಗಳ ಬಗ್ಗೆ
8. ನೌಕರರ ಜೇಷ್ಠತಾ ಸಂಖ್ಯೆಯನ್ನು ನಮೂದಿಸುವುದು.
9. ಹೈ-ಕ ಭಾಗದ ನಮೂನೆ ಡಿ ಪ್ರತಿ.
10. ಹಿರಿಯ ಪುರುಷ ಆರೋಗ್ಯ ಸಹಾಯಕರ ಖಾಲಿ ಹುದ್ದೆಗಳ ವಿವರ.

**ಕ್ರ.ಸಂ. 01 ರಿಂದ 10 ರವರೆಗಿನ ಎಲ್ಲಾ ಪ್ರತಿಗಳನ್ನು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಂದ ಕಡ್ಡಾಯವಾಗಿ ದೃಢೀಕರಿಸಿ ಸಲ್ಲಿಸುವುದು. ದೃಢೀಕರಿಸದ ಪ್ರತಿಗಳನ್ನು ಕಟ್ಟು ನಿಟ್ಟಾಗಿ ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ.**

ಈ ಮೇಲ್ಕಂಡ ಎಲ್ಲಾ ಮಾಹಿತಿ ದಾಖಲೆಗಳನ್ನು ದೃಢೀಕರಿಸಿ ಸಕಾಲದಲ್ಲಿ ನಿರ್ದೇಶನಾಲಯಕ್ಕೆ ಸಲ್ಲಿಸುವುದು. ಸಕಾಲದಲ್ಲಿ ಮಾಹಿತಿ ಬಾರದೆ ನೌಕರರು ಪದೋನ್ನತಿ ವಂಚಿತರಾದಲ್ಲಿ ಸಂಬಂಧಪಟ್ಟ ಕಚೇರಿ ಮುಖ್ಯಸ್ಥರನ್ನೇ ನೇರವಾಗಿ ಜವಾಬ್ದಾರರನ್ನಾಗಿಸಲಾಗುವುದು. ಒಂದು ವೇಳೆ ನೌಕರರು ಪದೋನ್ನತಿ ನಿರಾಕರಿಸಿದ್ದಲ್ಲಿ ಲಿಖಿತ ರೂಪದಲ್ಲಿ ಪಡೆದು ಸೇವಾಪುಸ್ತಕದಲ್ಲಿ ನಮೂದಿಸಿ ದೃಢೀಕರಿಸುವುದು. ಈ ನೌಕರರುಗಳಲ್ಲಿ ನಿವೃತ್ತಿ/ ಪದೋನ್ನತಿ/ ಮರಣ ಹೊಂದಿದ್ದಲ್ಲಿ ಅಂತಹವರ ಮಾಹಿತಿ ನೀಡುವುದು. ಈ ಮಾಹಿತಿ **<u>ಅತಿ ಜರೂರು</u>** ಎಂದು ಪರಿಗಣಿಸಿ **ದಿನಾಂಕ:12.11.2020** ರೊಳಗೆ ಮಾಹಿತಿ ಸಲ್ಲಿಸಲು ಸೂಚಿಸಿದೆ.

**ನಿರ್ದೇಶಕರು,**
**ಆರೋಗ್ಯ ಮತ್ತು ಕು.ಕ. ಸೇವೆಗಳು,**
**ಬೆಂಗಳೂರು.**

**ಪ್ರತಿಯನ್ನು ಮಾಹಿತಿಗಾಗಿ:-**

1. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ .................................... ಜಿಲ್ಲೆ.
2. ಆಯುಕ್ತರು, ಬಿಬಿಎಂಪಿ/ನಗರಸಭೆ/ಪುರಸಭೆ........................................
3. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
4. ಡೀನ್ ಮತ್ತು ನಿರ್ದೇಶಕರು, ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು/ಮೈಸೂರು/ಮಂಡ್ಯ/ಚಾಮರಾಜನಗರ/ಕೊಡಗು/ಹಾಸನ/ಶಿವಮೊಗ್ಗ/ ಬೆಳಗಾವಿ/ಹುಬ್ಬಳ್ಳಿ/ಉತ್ತರ ಕನ್ನಡ/ಗದಗ/ಬೀದರ್/ಕೊಪ್ಪಳ/ರಾಯಚೂರು/ಕಲಬುರಗಿ/ಬಳ್ಳಾರಿ.
5. ಡೀನ್ ಮತ್ತು ನಿರ್ದೇಶಕರು, ಎಸ್‌ಡಿಎಸ್/ಮಿಂಟೋ ಕಣ್ಣಾಸ್ಪತ್ರೆ/ಬೌರಿಂಗ್ & ಲೇಡಿ ಕರ್ಜನ್ ಆಸ್ಪತ್ರೆ, ಬೆಂಗಳೂರು.
6. ಡೀನ್ ಮತ್ತು ನಿರ್ದೇಶಕರು, ದಂತ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರ, ..........................................
8. ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ.........................................
9. ಪ್ರಾಂಶುಪಾಲರು, ಎ.ಎನ್.ಎಂ ತರಬೇತಿ ಕೇಂದ್ರ,.......................................
10. ತಾಲ್ಲೂಕು ಆರೋಗ್ಯಾಧಿಕಾರಿಗಳು,...................................................
11. ಜಿಲ್ಲಾ ಮಲೇರಿಯಾಧಿಕಾರಿಗಳು/ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿಗಳು/ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿಗಳು/ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು...............................................
12. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ/ಘಟಕ/ಸಮುದಾಯ ಆರೋಗ್ಯ ಕೇಂದ್ರ.........................
13. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು ಇವರಿಗೆ ಕಳುಹಿಸುತ್ತಾ, ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
14. ಆದೇಶ ಪ್ರತಿ/ ಕಛೇರಿ ಪ್ರತಿ.